**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 180/2023 **DW** 3

**ದಿ:24.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀಮತಿ ಜೆ ಪಿ ಡಿ ರವರಿಂದ.**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಾದ ನಿಶಾನೆ ಡಿ 9 ರಿಂದ ನಿಶಾನೆ ಡಿ 36 ರ ಬಗ್ಗೆ ನಗೆ ಮಾಹಿತಿ ಇದೆ. ಪ್ರತಿವಾದಿ 1 ರವರ ಮಾಹಿತಿ ನನಗೆ ಸುಮಾರು 20-21 ವರ್ಷಗಳಿಂದ ಇದೆ ಎನ್ನುತ್ತಾರೆ. ಅವರ ಮನೆತನದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಪ್ರತಿವಾದಿ ನಂಬರ 1 ಹಾಗೂ ಅವರ ತಮ್ಮನಾದ ಚನ್ನಮಲ್ಲಪ್ಪ ಇಬ್ಬರು 2001 ನೇ ಸಾಲಿನಲ್ಲಿ ಕೂಡಿ ಇದ್ದರು ಎಂದರೆ ಸಾಕ್ಷಿ ಇಲ್ಲ ಬೇರೆ-ಬೇರೆ ಇದ್ದರು ಎನ್ನುತ್ತಾರೆ. ಸಿಟಿ ಎಸ ನಂಬರ 2671 ಇದು ಒಟ್ಟು ಕ್ಷೇತ್ರ 92 ಸ್ಕ್ವೇರ ಯಾರ್ಡ ಇದ್ದು ಪ್ರತಿವಾದಿ 1 ಹಾಗೂ ಅವರ ತಮ್ಮನ ಹೆಸರಿನಲ್ಲಿ ಜಂಟಿ ಇತ್ತು ಎಂದರೆ ಸಾಕ್ಷಿ ಇದ್ದಿರಬಹುದು ಎನ್ನುತ್ತಾರೆ. ಸದರಿ ಆಸ್ತಿ ಪ್ರತಿವಾದಿ 1 ಹಾಗೂ ಅವರ ತಮ್ಮನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಯಾಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ.

ಸಿಟಿ ಎಸ ನಂಬರ 2671 ಹಾಗೂ ಸಿಟಿ ಎಸ ನಂಬರ 2672 ಎರಡು ಸೇರಿ 1 ನೇ ಪ್ರತಿವಾದಿ ಹಾಗೂ ಅವರ ತಮ್ಮ ಇಬ್ಬರು ಒಂದು ಕಾಂಪ್ಲೆಕ್ಸ ಕಟ್ಟಿಸಿದ್ದರು ಎಂದರೆ ಸಾಕ್ಷಿ ಇನ್ನು ಒಂದು-ಎರಡು ನಂಬರ ಇರಬಹುದು ಎನ್ನುತ್ತಾರೆ. ಸಿಟಿ ಎಸ ನಂಬರ 2670, 2671/1 ಮತ್ತು ಸಿಟಿ ಎಸ ನಂಬರ 2671/2, ಸಿಟಿ ಎಸ ನಂಬರ 2672/ಬಿ ಇವುಗಳು ಎನ್ನುತ್ತಾರೆ. ಇವುಗಳೆಲ್ಲವೂ ಸೇರಿ ಕಮರ್ಷಿಯಲ್ ಹಾಗೂ ರಹವಾಸಿ ಅಪಾರ್ಟಮೆಂಟ ಕಟ್ಟಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈ ಆಸ್ತಿಗೆ ಸಂಬಂಧಿಸಿದಂತೆ ಎಲ್ಲ ಮಾಲೀಕರಿಗೆ common ಸ್ಟೇರಕೇಸ ಹಾಗೂ ಕಾಮನ್ ಪ್ಯಾಸೇಜ ಇದೆ ಎಂದರೆ ಸರಿ.ಸದರಿ ಕಾಂಪ್ಲೆಕ್ಸ ಎಷ್ಟು ವರ್ಷಗಳ ಹಿಂದೆ ಕಟ್ಟಿಸಿದ್ದರು ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. 2002 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ಸಿಟಿ ಎಸ ನಂಬರ 2671 ಈ

ಆಸ್ತಿಯನ್ನು ಬೈಲಹೊಂಗಲ್ ಅರ್ಬನ ಕೋ-ಆಪರೇಟಿವ್ ಬ್ಯಾಂಕಿಗೆ ಒತ್ತೆ ಹಾಕಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಮುಂದೆ ಅವರು ಸಾಲ ಮರುಪಾವತಿ ಮಾಡಲು ಬ್ಯಾಂಕಿಗೆ ಡಿಪಾಲ್ಟರ ಆದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲ ಬೈಲಹೊಂಗಲ್ ಬ್ಯಾಂಕಿನಿಂದ ಕರ್ನಾಟಕ ಬ್ಯಾಂಕಗೆ ಟೇಕ್ ಓವರ್ ಆಯಿತು ಎಂದು ಈ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ 2012 ರಲ್ಲಿ ನನಗೆ ಗೊತ್ತಾಯಿತು ಎನ್ನುತ್ತಾರೆ. ಕರ್ನಾಟಕ ಬ್ಯಾಂಕಗೆ  ಎಷ್ಟು ಕ್ಷೇತ್ರವನ್ನು ಒತ್ತೆ ಹಾಕಿದ್ದರು ಎಂಬ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ಕರ್ನಾಟಕ ಬ್ಯಾಂಕಗೆ ಪ್ರತಿವಾದಿ ನಂಬರ 1 ನೇದವರು ಒತ್ತೆ ಮಾಡಿಕೊಟ್ಟ ಆಸ್ತಿಗೆ ಸಂಬಂಧಿಸಿದಂತೆ ಇಬ್ಬರಿಗೆ ಸೇಲ್ ಸರ್ಟಿಫೀಕೇಟ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಮಾಹಿತಿ ಇದೆ ಎನ್ನುತ್ತಾರೆ. ಇಬ್ಬರು ಕೇಸ ದಾಖಲಿಸಿದ್ದರು ಎಂದು ಹೇಳಿದ್ದು ಅವರು ಯಾರು ಎಂದರೆ ಸಾಕ್ಷಿ ವಾಸುದೇವಸಾ ಪಟ್ಟಣ ಮತ್ತು ಶಂಕರಸಾ ಪಟ್ಟಣ ಇವರು ನನ್ನನ್ನು ಮತ್ತು ಕರ್ನಾಟಕ ಬ್ಯಾಂಕಗೆ ಹಾಗೂ ವೀರಣ್ಣ ಮುಳಮುತ್ತಲ, ಅರುಣ ಮುಳಮುತ್ತಲ ಇವರೆಲ್ಲರನ್ನು ಪಕ್ಷಗಾರನ್ನಾಗಿ ಮಾಡಿ ದಾವಾ ಹಾಕಿದ್ದರು ಎನ್ನುತ್ತಾರೆ. ಸಿಟಿಎಸ ನಂಬರ 2671ರಲ್ಲಿ 406 ಅಂಗಡಿಯನ್ನು ಮಾತ್ರ ನಾನು ಖರೀದಿ ಹಿಡಿದಿದ್ದೇನೆಂದು ತಕರಾರು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಪೂರಾ ಬಿಲ್ಡಿಂಗ ಖರೀದಿ ಹಿಡಿದಿದ್ದೆ ಎಂದು ತಕರಾರು ಸಲ್ಲಿಸಿದ್ದೆ ಎನ್ನುತ್ತಾರೆ. ನಾವು ಖರೀದಿ ಹಿಡಿದಿರುವಂತಹ ಆಸ್ತಿ ಹಾಗೂ ಕರ್ನಾಟಕ ಬ್ಯಾಂಕಗೆ ಒತ್ತೆ ಇಟ್ಟ ಆಸ್ತಿಯೇ ಬೇರೆ ಎಂದು ನಾನು ತಕರಾರು ಹಾಕಿದ್ದೆ ಎಂದರೆ ಸಾಕ್ಷಿ ಹಾಕಿದ್ದು ನಿಜ, ಆ ನಂತರ ನನಗೆ ಗೊತ್ತಾಯಿತು ಅದು ಒಂದೆ ಆಸ್ತಿ ಎಂದು, ನಂತರ ರಾಜಿ ಡಿಕ್ರಿ ಮಾಡಿಕೊಂಡೆವು ಎಂದು ಸಾಕ್ಷಿ ನುಡಿಯುತ್ತಾರೆ.

1ನೇ ಪ್ರತಿವಾದಿಯಿಂದ ನಾನು ದಿಃ14-02-2011 ರಂದು ಆಸ್ತಿಯನ್ನು ನಿಶಾನೆ ಡಿ 17 ರ ಪ್ರಕಾರ ಖರೀದಿ ಹಿಡಿದಿದೇನು. ಖರೀದಿ ಮಾಡುವಕ್ಕಿಂತ ಪೂರ್ವದಲ್ಲಿ ಸಂಚಗಾರ ಪತ್ರ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಮಾಡಿಕೊಂಡಿದೇವು ಎನ್ನುತ್ತಾರೆ. ಸಂಚಗಾರ ಪತ್ರ ಮಾಡಿಕೊಳ್ಳುವಾಗ ಎಷ್ಟು ಖರೀದಿ ಮೊತ್ತಕ್ಕೆ ಒಪ್ಪಿಕೊಂಡಿದ್ದೀರಿ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಖರೀದಿ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಎಷ್ಟು ಹಣಕ್ಕೆ ಖರೀದಿ ಮಾಡಿದೀರಿ ಎಂದರೆ ಸಾಕ್ಷಿ 18 ಲಕ್ಷಕ್ಕೆ ಎನ್ನುತ್ತಾರೆ. ನಾನು ಖರೀದಿ ಹಿಡಿದ ಆಸ್ತಿಯ

ವಿಸ್ತೀರ್ಣ ವಿವರಣೆ ಹೇಳಲು ಬರುತ್ತದೇಯಾ ಎಂದರೆ ಸಾಕ್ಷಿ ಸಿಟಿಎಸ ನಂಬರ 2671/1 ಕ್ಷೇತ್ರ 50.1/9 ಸ್ಕ್ವೇರ ಯಾರ್ಡ ಇರುತ್ತದೆ. ಸದರಿ ಆಸ್ತಿಯಲ್ಲಿ Ground floor, 1st floor and 2nd floor ಕಟ್ಟಡ ಇರುತ್ತದೆ. ಪ್ರತಿ ಪ್ಲೌರ್‌ಗೆ ಬಿಲ್ಟಫ ಏರಿಯಾ ಎಷ್ಟು ಇದೆ ಎಂದರೆ ಸಾಕ್ಷಿ ಪ್ರತಿ floor 451 ಚದರ ಅಡಿ as per records ಇದೆ ಎನ್ನುತ್ತಾರೆ. ನಿಶಾನೆ ಡಿ 17 ರ ಕೊನೆಯ ಪ್ಯಾರಾದಲ್ಲಿ ಸದರಿ ಖರೀದಿಗೆ ಕೊಟ್ಟ ಆಸ್ತಿಯ ಮೇಲೆ ಹಣದ ಭೋಜಾ ವ ಅಟ್ಯಾಚ ಇರುವುದಿಲ್ಲ ಮತ್ತು ಬೇರೆಯವರಿಗೆ ಒತ್ತಿ ಖರೀದಿ ವಗೈರೆ ಯಾವುದೇ ರೀತಿಯಿಂದ ಬರಕೊಟ್ಟು ಪರಾಧೀನ ಮಾಡಿರುವುದಿಲ್ಲ ಎಂದು ನಾನು ನಿಮಗೆ ಖಾತರಿಯಿಂದ ಹೇಳಿದ ಮಾತಿಗೆ ನಂಬಿ ನೀವು ನನ್ನ ಕೂಡಾ ಈ ಖರೀದಿ ವ್ಯವಹಾರ ಮಾಡಿರುತ್ತೀರಿ ಎಂಬುವುದಾಗಿ ಬರೆದಿದೆ ಎಂದರೆ ಸರಿ. ನೀವು ಯಾವ ಬ್ಯಾಂಕಿನ ಚೆಕಗಳನ್ನು ಖರೀದಿ ಸಂಚಗಾರ ಹಣ ಕೊಡವುದಕ್ಕೆ ಬಳಸಿದೀರಿ ಎಂದರೆ ಸಾಕ್ಷಿ ವಿಜಯಾ ಬ್ಯಾಂಕ ಎನ್ನುತ್ತಾರೆ. ಬಾಕಿ ಉಳಿದ 5 ಲಕ್ಷ್ಯ ರೂಪಾಯಿಗಳನ್ನು ವಿಜಯಾ ಬ್ಯಾಂಕಿನ ಡಿಡಿ ಕೊಟ್ಟಿರುತ್ತೇನೆ. ನಿಶಾನೆ ಡಿ 20 ಎಂದು ಹಾಜರುಪಡಿಸಿದ್ದು ನಾನು ಖರೀದಿ ಮಾಡುವ ಸಮಯದಲ್ಲಿ ಇದನ್ನು ನೋಡಿ ಖರೀದಿ ಮಾಡಿರುತ್ತೇನೆಂದರೆ ಸರಿ. 1933 ರ ಪೂರ್ವದಲ್ಲಿ ರಾಚಪ್ಪ ಚನ್ನಮಲ್ಲಪ್ಪ ಮುಳಮುತ್ತಲ ಇವರ ಮೂಲ ಆಸ್ತಿ ನಿಶಾನೆ ಡಿ 20 ರ ಪ್ರಕಾರ ಇತ್ತು ಎಂದರೆ ಸಾಕ್ಷಿ  ಹೌದು ಎನ್ನುತ್ತಾರೆ. ಅವರಿಗೂ ಕೂಡಾ ಸದರಿ ಆಸ್ತಿ ಪಿತ್ರಾರ್ಜಿತವಾಗಿ ಬಂದಿತ್ತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ರಾಚಪ್ಪ ತೀರಿಕೊಂಡ ನಂತರ ಅವರ ಮಗ ಶಿವಪ್ಪ ರಾಚಪ್ಪ ಮುಳಮುತ್ತಲ ದಿಃ30-03-1933 ರಂದು ವಾರಸಾ ನಾತೆ ಪ್ರಕಾರ ಆಸ್ತಿಗೆ ಹಕ್ಕುದಾರರು ಆದರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನಂತರ 1976 ರಲ್ಲಿ ಸದರಿ ಆಸ್ತಿಯನ್ನು ಶಿವಪ್ಪ ಅವರು ಅವರ ಇಬ್ಬರ ಮಕ್ಕಳಾದ ಚನ್ನಮಲ್ಲಪ್ಪ ಹಾಗೂ ವೀರಣ್ಣ ಇವರಿಗೆ ಅಪಾಸತ್ ವಾಟ್ನಿ ಮೂಲಕ ಕೊಟ್ಟರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಪ್ರತಿವಾದಿ 1 ವೀರಣ್ಣ ಇವರಿಗೆ ಈ ಆಸ್ತಿ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದರೆ ಸಾಕ್ಷಿ ಅವರ ಸ್ವಂತ ಆಸ್ತಿ ಎಂದು ನ್ಯಾಯಾಲಯದ ಡಿಕ್ರಿ ನೋಡಿ ನಾವು ಖರೀದಿ ಮಾಡಿದ್ದೇವೆ ಎನ್ನುತ್ತಾರೆ. ಆ ಡಿಕ್ರಿ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅಸಲು ದಾವಾ ನಂಬರ 129/2007 ರ ಡಿಕ್ರಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ.  ನಿಶಾನೆ ಡಿ 3 ಎಂದು

ಹಾಜರುಪಡಿಸಿರುವುದು ಡಿಕ್ರಿಯಾಗಿದ್ದು ಅದು ಬ್ಯಾಂಕಿನ ಸಾಲದ ಸಂಬಂದ ಅಡತಡೆ ಮಾಡುವ ಸಲುವಾಗಿ ಸಲ್ಲಿಸಿದ್ದ ದಾವೆ ಎಂದರೆ ಸಾಕ್ಷಿ ಅದು ಪಾಲು ವಿಭಾಗದ ದಾವೆ ಆಗಿತ್ತು ಆ ಡಿಕ್ರಿ ಪ್ರಕಾರ ಅವರಿಗೆ ಪಾಲು ಇಲ್ಲ ಎಂದು ಆದೇಶವಾಗಿದ್ದರಿಂದ ನಾನು ಖರೀದಿ ಮಾಡಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. ಕರ್ನಾಟಕ ಬ್ಯಾಂಕಿಗೆ ಕಟಬಾಕಿ ಆಗಿದ್ದ ಅವರು ಬ್ಯಾಂಕಿನ ವ್ಯವಹಾರವನ್ನು ತಡೆಯುವ ಉದ್ದೇಶದಿಂದ ಸದರಿ ಈ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಬ್ಯಾಂಕಿನ ಕಟಬಾಕಿ ತಡೆಯುವ ಉದ್ದೇಶದಿಂದ ಅಡತಡೆ ಮಾಡಲು ಸಲ್ಲಿಸಿದ ದಾವೆ ಎಂಬುವುದು ನನಗೆ ಗೊತ್ತಿದ್ದರು ಕೂಡಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2011 ರಲ್ಲಿ ದಾವಾ ಆಸ್ತಿ ಖರೀದಿ ಮಾಡಿದ್ದೇನೆಂದು ಹೇಳಿದ್ದು ಅದಕ್ಕೆ ಕಿರಣ ಮುಳಮುತ್ತಲ ಇವರ ಸಹಿ ಪಡೆದಿದ್ದೇನೆಂದರೆ ಸಾಕ್ಷಿಯಾಗಿ ಸಹಿ ಹಾಕಿಸಿದ್ದೇನೆ ಎನ್ನುತ್ತಾರೆ. ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗೆ ಎಲ್ಲ ಮಕ್ಕಳು ಕಾಯ್ದೆ ಬದ್ದವಾದ ವಾರಸುದಾರರು ಇರುತ್ತಾರೆ ಎಂದರೆ ಸಾಕ್ಷಿ ಅದು ಗೊತ್ತಿಲ್ಲ, ಈ ಆಸ್ತಿ ಮಾತ್ರ ಅವರ ಸ್ವಂತ ಆಸ್ತಿ ಎನ್ನುತ್ತಾರೆ. 2011 ರಲ್ಲಿ 1 ನೇ ಪ್ರತಿವಾದಿಯಿಂದ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ವಾದಿಯ ಅನುಮತಿ ಕೇಳಿದ್ದು ಅವರು ನನ್ನ ಹಿಸ್ಸೆ ನಾನು ಮಾರಾಟ ಮಾಡುವುದಿಲ್ಲವೆಂದು ಹೇಳಿದ್ದರು ಎಂದರೆ ಸಾಕ್ಷಿ ಅದನ್ನು ಕೇಳುವ ಪ್ರಮೇಯವೆ ಒದಗಿಲ್ಲ ಡಿಕ್ರಿ ಪ್ರಕಾರ ನಾನು ತೆಗೆದುಕೊಂಡಿರುತ್ತೇನೆ ಎನ್ನುತ್ತಾರೆ. ಮೇಲೆ ಹೇಳಿದ ದಾವೆಗಳಿಗೆ ಪ್ರತಿವಾದಿ ನಂಬರ 1, 2 ರವರು ಯಾರು ತಕರಾರು ಹಾಕಿಲ್ಲ ಬ್ಯಾಂಕ ಮಾತ್ರ ತಕರಾರು ಹಾಕಿ ಆ ದಾವೆಯನ್ನು contest ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಂಪ್ಲೆಕ್ಸನಲ್ಲಿ ತುಂಬಾ ಅಂಗಡಿಗಳಿವೆ ಎಂದರೆ ಸರಿ. ಎರಡು ಅಂಗಡಿಗಳು ಮಾತ್ರ ಸೇಲ್ಸ ಸರ್ಟಿಫೀಕೇಟ ಮೂಲಕ ಕರ್ನಾಟಕ ಬ್ಯಾಂಕರವರು ಮಾರಾಟ ಮಾಡಿದ್ದರು ಎಂದರೆ ಸರಿ. ಖರೀದಿಯಾದ ನಂತರ ನಾನು ವಿಜಯಾ ಬ್ಯಾಂಕನಲ್ಲಿ ಸಾಲ ತೆಗೆದುಕೊಂಡೆ ಎಂದರೆ ಸಾಕ್ಷಿ ಖರೀದಿಗೆ ಮೊದಲಿಗೂ ತೆಗೆದುಕೊಂಡಿದ್ದು ಖರೀದಿ ಆದ ನಂತರವು ನನ್ನ ಹೆಸರಿನಲ್ಲಿ ತೆಗೆದುಕೊಂಡಿರುತ್ತೇನೆ. ಆದೇ ರೀತಿ 2017 ರಲ್ಲಿಯೂ ಕೂಡಾ ಸಾಲ ಪಡೆದಿದ್ದೇನೆಂದರೆ ಸರಿ. ಕರ್ನಾಟಕ ಬ್ಯಾಂಕನವರು ಸೇಲ ಸರ್ಟಿಫೀಕೇಟ ಮೂಲಕ ಕೊಟ್ಟಂತಹ ಎರಡು ಅಂಗಡಿಗಳು ಪ್ರತಿವಾದಿ 1 ಮತ್ತು ಅವರ ತಮ್ಮನ ನಡುವೆ ಪಾಲು ವಿಭಾಗ ಆಗುವುದಕ್ಕಿಂತ ಮೊದಲು ಕೊಟ್ಟಂತಹ ಅಂಗಡಿಗಳು ಎಂದರೆ ಸಾಕ್ಷಿ ಆಗಲೆ ಅವರು ಪ್ರತ್ಯೇಕವಾಗಿದ್ದರು ಎನ್ನುತ್ತಾರೆ. ಯಾವ ವರ್ಷ ಪ್ರತ್ಯೇಕವಾದರು ಎಂದರೆ ಸಾಕ್ಷಿ

2002 ರಲ್ಲಿ ಆಗಿರಬೇಕು ಎನ್ನುತ್ತಾರೆ. 2002 ರಲ್ಲಿ ಪ್ರತ್ಯೇಕವಾಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2006 ರವರೆಗೂ ಆಸ್ತಿಗಳು ಜಂಟಿ ಇದ್ದವು ಎಂದರೆ ಸಾಕ್ಷಿ ಬೇರೆ ಬೇರೆ ಇದ್ದವು ಎನ್ನುತ್ತಾರೆ. ದಿಃ09-01-2007 ರ ಪ್ರಕಾರ ವಿಭಾಗವಾಗಿ ಅವರು ಸಿಟಿಎಸ ನಂಬರ 2671/1 ಕ್ಕೆ ಅವರು ಮಾಲೀಕರಾದರು ಎಂದರೆ ಸಾಕ್ಷಿ 2002 ರಲ್ಲಿ ಅವರು south and north ಎಂಬುವುದಾಗಿ ಪ್ರತ್ಯೇಕವಾಗಿದ್ದು 2007 ರಲ್ಲಿ ಆದ ವಿಭಾಗದ ಪ್ರಕಾರ ಪ್ರತ್ಯೇಕವಾಗಿದೆ ಎನ್ನುತ್ತಾರೆ. ಸಿಟಿಎಸ ನಂಬರ 2671/1 ರಲ್ಲಿ 46 square yards ಇದ್ದು 2007 ರಲ್ಲಿ ವಿಭಾಗವಾದ ನಂತರ 50.1/9 square yards 1 ನೇ ಪ್ರತಿವಾದಿಗೆ ಬಂದಿತ್ತು ಎನ್ನುತ್ತಾರೆ. ನಾನು ಖರೀದಿ ಮಾಡಿದ ಆಸ್ತಿ ಹಾಗೂ ದಾವಾ ಆಸ್ತಿ ಒಂದೆ ಇದೆ ಎಂದರೆ ಸಾಕ್ಷಿ ಹೌದು ಖರೀದಿ ಮಾಡುವ ಮೊದಲು ಗೊತ್ತಿರಲಿಲ್ಲ ನಂತರ ಗೊತ್ತಾಯಿತು ಎನ್ನುತ್ತಾರೆ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಇರುವ ಕಾರಣ ವಾದಿಗೆ 1/3 ಹಿಸ್ಸೆಯ ಹಕ್ಕು ಇದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗೆ 1/3 ಹಿಸ್ಸೆ ಕಾಯ್ದೆಬದ್ದವಾಗಿ ಬರಬೇಕು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನ್ಯಾಯಾಲಯ ನಿರ್ಣಯ ಮಾಡಿದೆ ಎಂದು ಹೇಳಿದ್ದು ಆ ರೀತಿ ನಿರ್ಣಯವಾಗಿಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ದಾಖಲೆಗಳ ಮೂಲಕವೆ ಎಲ್ಲವು ಸತ್ಯ ಇದ್ದರು ಕೂಡಾ ನಾನು ಸುಳ್ಳು ಪ್ರಮಾಣ ಪತ್ರ ಬರೆದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ವಿಜಯಾ ಬ್ಯಾಂಕಿನಲ್ಲಿ ಮಾಡಿರುವ ಸಾಲ ನನಗೆ ಸಂಬಂಧಿಸಿದ್ದು ಆ ಕಾರಣಕ್ಕೆ ವಾದಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸಾಕ್ಷಿ ಆ ಸಾಲ ಆಸ್ತಿ ಮೇಲೆ ಇರುವ ಸಾಲ ಎನ್ನುತ್ತಾರೆ. 1/3 ಹಿಸ್ಸೆಗೆ ಸಂಬಂಧಿಸಿದಂತೆ ಆತ ಹಕ್ಕುದಾರನೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಮರು ವಿಚಾರಣೆಃಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ